ಮೊದಲು ಅವಳ ಎರಡೂ ಕೈಗಳನ್ನು ಹಿಡಿದು ''ಯು ಆರ್ ಲವ್ಲೀ ಪರ್ಸನ್" ಎಂದು ಮೆಲ್ಲಗೆ ಹಸ್ತಗಳನ್ನು ಅದುಮಿದ. ಟ್ರೇನಿನ ಬಾಗಿಲಲ್ಲಿ ನಿಂತು ಸಿನಿಮಾದಲ್ಲಿ ಮಾಡುವಂತೆ ದೂರದ ವರೆಗೂ ಕೈ ಬೀಸಿ ಒಂದು ಫ್ಲೈಯಿಂಗ್ ಕಿಸ್ ಕಳಿಸಿದ! ಅವಳ ಹೂಮೊಗದಲ್ಲಿ ಸುಂದರ ತುಟಿಗಳು ಚಿಟ್ಟೆಯಂತೆ ಕಂಪಿಸಿದವು! ತುಂಬಾ ದಿನಗಳ ವರೆಗೆ ಅದೇ ಹ್ಯಾಂಗೋವರಿನಲ್ಲಿ ಉಳಿದಿದ್ದ.

''ಓ ಕುಸುಮವೆ! ನಿನ್ನ ಸ್ಪರ್ಶಿಸಿದ ನನ್ನ ಬೆರಳುಗಳು ಇನ್ನೂ ಘಮಘಮಿಸುತಿವೆ, ನೀ ಹೇಗಿರುವೆ?"

''ಓ ಎರಡೂ ಕೈ ಕೊಟ್ಟು ಹೋಗಿದ್ರಿ... ಮತ್ತೆ ಮರೆತೇ ಬಿಟ್ರೋ ಅಂದ್ಕೊಂಡೆ. ನಿಮ್ಮ ಎಸ್ಸೆಮ್ಮೆಸ್ ಕಂಡು ನನ್ನ ತಲೆನೋವು ಹೊಟ್ಟೆನೋವು ಎಲ್ಲಾ ಹೊರಟುಹೋಯ್ತು, ಮಾರಾಯ್ರೆ."

''ಯಾಕೆ ಹುಶಾರಿಲ್ವ?"

''ಅಂಥಾದೇನಿಲ್ಲ, ನಂಗೆ ಪೀರಿಯಡ್ಸ್ ಅಷ್ಟೆ."

''ಓ ಹೌದಾ! ಅಂದ್ರೆ ಎರಡೂ ಕೈಮುಟ್ಟಿದರೂ ಮಕ್ಕಳಾಗೋದಿಲ್ಲ ಅಂತಾಯ್ತು.''

''ಥೂ ಹೋಗ್ರೀ... ಕಥೆಗಾರರು ಪೋಲಿಗಳಾಗ್ತಿದಾರೆ ಹಾಂ! ಅದ್ಸರಿ ಬರುವಾಗ ಏನ್ ತರ್ತೀರಾ?"

"ಇಲ್ಲಿ ಚಂದದ ಮಳೆಬೀಳುತ್ತಿದೆ, ಒಂದು ಬೊಗಸೆ ಮಳೆ ನೀರು ತರಲಾ?"

''ಬರೀ ಒಂದು ಬೊಗಸೆ? ನನಗೆ ಇಡೀ ಮಳೆಗಾಲದ ಆಸೆ!"

ಆ ಆಸೆ ಈಡೇರಲೂ ತಡವಾಗಲಿಲ್ಲ. ಆ ದಿನ ಓವಲ್ ಗ್ರೌಂಡಲ್ಲಿ ಮೀಟ್ ಮಾಡಿ ಜೊತೆಗೆ ಒಂದು ಸುತ್ತುಹಾಕಿ ಹತ್ತಿರದ ರೆಸ್ಟಾರೆಂಟನಲ್ಲಿ ಐಸಕ್ರೀಮ್ ತಿನ್ನುವ ಪ್ಲಾನ್ ಮಾಡಿಕೊಂಡಿದ್ದರು. ಮೋಡವಿತ್ತಾದರೂ ಮಳೆ ಬರುವ ನಿರೀಕ್ಷೆ ಇರಲಿಲ್ಲ. ಹಸಿರುಹುಲ್ಲು ಹಾಸಿನ ಮೈದಾನದ ಅಂಚಲ್ಲಿ ನಡೆದಾಡುವಾಗ ಮೈಕೈ ಸೋಕಿ ಮನದಲ್ಲಿ ಹಸಿಹಸಿ ಭಾವನೆಗಳಿಗೆ ತಂಪೆರೆಯುವಂತೆ ಮಳೆ ಶುರುವಾಗಿಯೇ ಬಿಟ್ಟಿತು. ವಾಕ್ ಮಾಡುತ್ತಿದ್ದವರೆಲ್ಲ ಅಲ್ಲಲ್ಲೆ ಸರಿದು ಮೈದಾನ ಬೆತ್ತಲಾಗಿತ್ತು. ಕುಸುಮ ಮತ್ತು ಶಾಂತ ಸುರಿವ ಮಳೆಯಲ್ಲಿ ತೊಯ್ದರೂ ನಡೆಯೋದನ್ನು ನಿಲ್ಲಿಸಿರಲಿಲ್ಲ. ಇಬ್ಬರ ಬೆಸೆದ ಹಸ್ತಗಳಲ್ಲಿ ಬೆಚ್ಚಗಿನ ಭಾವ ಭದ್ರವಾಗಿತ್ತು. ನಾಲಿಗೆ ಹೊರಚಾಚಿ ಮಳೆಹನಿಯ ಕಚಗುಳಿ ಮಾಡಿಸಿಕೊಂಡಿದ್ದರು. ತಲೆ ಹಣೆ ಕೆನ್ನೆ ಗಲ್ಲದಿಂದ ಜಾರುವ ಮಳೆಹನಿಗಳು ಬೆಚ್ಚನೆಯ ಭಾವಕ್ಕೆ ಆವಿಯಾಗುತ್ತಿದ್ದವು. ಕುಸುಮಳ ಕಣ್ಣುಗಳು ಮೊದಲ ಮಳೆಗೆ ಈಸುವ ಮೀನುಗಳಂತೆ ಮಿಸುಕುತ್ತಿದ್ದವು. ಶಾಂತರಾಮ ಅವಳ ಮುಖವನ್ನು ಬೊಗಸೆಯಲ್ಲಿ ಹಿಡಿದು, ''ನನ್ನ ಬರಬಿದ್ದ ಮನದೊಳಗೆ ಸುರಿವ ಮಳೆಯಾದ್ರಿ ಕುಸುಮ" ಎಂದಿದ್ದ. ಅವಳು ಹುಸಿಕೋಪ ನಟಿಸುತ್ತಾ ''ನಾನ್ಸೆನ್ಸ್" ಅಂದಾಗ ಇವನು ಒಂದು ಕ್ಷಣ ಶಾಕ್ ಆದಂತೆ ನಿಂತಿದ್ದ. ಕುಸುಮ ನಕ್ಕು ಅಪ್ಪಿ ಅವನ ಹಸಿಹಸಿ ತುಟಿಗಳಿಗೆ ಸಿಹಿಯನ್ನು ಸವರಿದ್ದಳು!

ಇಂಥ ಕುಸುಮಳಂಥ ಕುಸುಮ ಸ್ನೇಹದಂಥ ಪ್ರೀತಿಯನ್ನೂ ಪ್ರೀತಿಯಂಥ ಸ್ನೇಹವನ್ನೂ ಒಂದು ದೀರ್ಘ ಮೌನದಲ್ಲಿ ಜಜ್ಜಿಹಾಕುತ್ತಾಳೆ ಎಂದು ಶಾಂತಾರಾಮ ಸರ್ವಥಾ ಕಲ್ಪಿಸಿರಲಿಲ್ಲ. ಅವಳ ನಿಷ್ಕಾರಣ ವಿದಾಯದಿಂದಾಗಿ ಮಾನಸರೋವರ ಸ್ಟೇಶನ್ನಿನ ಈ ಬೆಂಚಿನ ಅರ್ಧಭಾಗವು ಹೀಗೆ ತನ್ನ ಖಾಲಿತನದ ಪ್ರಕಟರೂಪವಾಗುತ್ತದೆ ಎಂದು ಎಣಿಸುವುದು ಶಾಂತಾರಾಮನಿಗೆ